ರಾಮಣ್ಣನ ಸಿದ್ಧ ಹಸ್ತದ ತಿಂಡಿಯೆನ್ನಿಸಿದ ಬಾಳೇಹಣ್ಣಿನ ಬನ್ನೂ ಕಾಣಲಿಲ್ಲ. ಕೂಲಿಯೊಬ್ಬನಿಗೆ ಚಹಾ ತಂದಿಟ್ಟ ಸಪ್ಲೈಯರ್ ನನ್ನ ನೋಡುತ್ತಲೆ ದೌಡಾಯಿಸಿ ಬಂದು, 'ಏನು ಕೊಡಲಿ ಸಾರ್' ಎಂದ. 'ದೋಸೆ, ಬನ್ಸು ಏನೂ ಇಲ್ಲವೇನಪ್ಪ' ಎಂದೆ. ಆತ ತಲೆಯಾಡಿಸಿ, 'ಅವಲಕ್ಕಿ ಶೇವು, ಇಡ್ಲಿ, ಉಪ್ಪಿಟ್ಟು ಇದೆ' ಎಂದ. 'ಸರಿಯಪ್ಪ, ಬಿಸಿಯಿದ್ದರೆ ಒಂದು ಪ್ಲೇಟು ಇಡ್ಲಿ, ಒಂದು ಪ್ಲೇಟು ಉಪ್ಪಿಟ್ಟು ತಗೊಂಬಾ' ಎಂದೆ. ನಿಮ್ಮ 'ಸಾಹುಕಾರರು ಇಲ್ಲವೇನಪ್ಪ' ಎಂದು ಕೇಳಬೇಕೆನ್ನುವಷ್ಟರಲ್ಲಿ ಆತ ಅಲ್ಲಿಂದ ಮಾಯವಾಗಿದ್ದ. ಗಲ್ಲಾದತ್ತ ನೋಡಿದರೆ ಅದು ಖಾಲಿಯಾಗಿತ್ತು.

ಹುಡುಗ ತಂದ ತಿಂಡಿಯನ್ನು ತಿನ್ನುತ್ತಿದ್ದಂತೆ ನಿಜ ವಯಸ್ಸಿಗಿಂತ ಹೆಚ್ಚಿನ ವಯಸ್ಸಾದವರೆನ್ನಿಸುವ ವ್ಯಕ್ತಿಯೊಬ್ಬ ಗಲ್ಲಾ ಪೆಟ್ಟಿಗೆಯತ್ತ ನಡೆದು, ಚಹಾ ಕುಡಿದು ಹೊರಟ ಹಮಾಲಿಗಳಿಂದ ಹಣ ತೆಗೆದುಕೊಳ್ಳುತ್ತಿದ್ದರು. ತಟ್ಟನೆ ಗುರುತು ಹಿಡಿದೆ. ಹೌದು, ಅವನೇ, ಅವನೇ. ರೂಪ ಬದಲಾಗಿತ್ತಷ್ಟೆ. ಸೊಂಪಾಗಿದ್ದ ತಲೆ ಕೂದಲು ಬಹಳಷ್ಟು ಉದುರಿ, ವಿಶಾಲ ಹಣೆಯಾಗಿತ್ತು. ಮುರಿದು ನಿಂತ ಮುಂದಿನೆರಡು ಹಲ್ಲುಗಳು, ಕುರುಚಲು ಬಿಳಿಯ ಗಡ್ಡ, ತಮ್ಮ ಆಯಸ್ಸು ಮುಗಿಯುವ ಮುನ್ನವೇ ಉದುರಿ ಬಿದ್ದಿರಬಹುದಾದ ದವಡೆ ಹಲ್ಲುಗಳ ಕಾರಣದಿಂದ ಒಳಹೊಕ್ಕ ಕೆನ್ನೆ, ಜರ್ಝರಿತ ಶರೀರ ಮುಪ್ಪಿಗೆ ಸಾಕ್ಷಿಯಾಗಿದ್ದವು. ಈಗ ಮುಪ್ಪಿನ ವಯಸ್ಸೇ ಅಲ್ಲವೇ? ಆದರೂ ಕಂದೂ ಅಲ್ಲದ, ಕಪ್ಪೂ ಅಲ್ಲದ ವರ್ಣಕ್ಕೆ ತಿರುಗಿದ ಒಂದು ಕಾಲದಲ್ಲಿ ಬಿಳಿಯದಾಗಿದ್ದಿರಬಹುದಾದ ಬನಿಯನ್ನು, ಭುಜದಲ್ಲಿ ಹರಿದು ದೇಹ ತನಗಿಂತ ಹೆಚ್ಚು ಕಪ್ಪೇ ಇದೆ ಎನ್ನುವುದನ್ನ ತೋರಿಸುವಂತಿದ್ದುದು ಆತನ ಸ್ಥಿತಿಯನ್ನೂ ತೋರಿಸುವಂತಿತ್ತು.

ತಿಂಡಿಯ ಬಳಿಕ ಮೇಲೊಂದು ಕರಿಯ ಚಹಾವನ್ನು ತುಸು ಗುಟುಕರಿಸಿ, ಗಲ್ಲಾ ಪೆಟ್ಟಿಗೆಯ ಬಳಿ ನಿಂತು ಅವರನ್ನೇ ನಿರುಕಿಸುತ್ತಿದ್ದಾಗ ನಾನು ಬಿಲ್ ಕೇಳುತ್ತೇನೆಂದುಕೊಂಡ ಅವರು ನನ್ನ ಟೇಬಲ್ಲಿನತ್ತ ತಿಂದು ಬಿಟ್ಟ ಪ್ಲೇಟುಗಳನ್ನು ನೋಡಿಯೆ ಲೆಕ್ಕ ಹಾಕಿ 'ಹದಿನೈದು ಹದಿನೈದು ಎಂಟು ಮೂವತ್ತೆಂಟು' ಎಂದ. ನಾನು ಹಣ ಕೊಡುವುದನ್ನು ಬಿಟ್ಟು ಮತ್ತೂ ಆತನನ್ನೇ ನೋಡುತ್ತ ನಿಂತಾಗ ಗಲಿಬಿಲಿಗೊಂಡ. ಹಣವಿಲ್ಲದವನ ಹಾಗೆ ಕಾಣುವುದಿಲ್ಲ, ಹಾಗೆಂದು.. ಮತ್ತೆ ನನ್ನನ್ನೆ ಕಿರುಗಣ್ಣಿನಿಂದ ನೋಡುತ್ತ 'ನೀವು ಯಾರು ಅಂತ ತಿಳಿಯಲಿಲ್ಲ, ನನ್ನಿಂದ ಏನಾದರು ಆಗಬೇಕಿತ್ತಾ? ಬಡವನ ಹೊಟೇಲು....' ಸಣ್ಣದಾಗಿ ಗೊಣಗಿದಂತೆ ನುಡಿದು ತನ್ನ ಹಳೆಯ ಮೇಜಿನ ಡ್ರಾ ಎಳೆದು ಏನನ್ನೋ ಹುಡುಕತೊಡಗಿದಾಗ ಪುರಸಭೆಯ ಪರವಾನಗಿ ಪತ್ರಕ್ಕಾಗಿ ಹುಡುಕುತ್ತಿದ್ದಾನೆ ಎನ್ನುವುದನ್ನು ಅರ್ಥವಿಸಿಕೊಂಡ ನಾನು ಆತನನ್ನು ಇನ್ನಷ್ಟು ಗೊಂದಲಕ್ಕೆ ಈಡು ಮಾಡಬಾರದೆಂದುಕೊಂಡು 'ಅದೇನು ಬೇಡ ಬಿಡು ರಾಮಣ್ಣ' ಎಂದದ್ದೆ ನಾನು ತನ್ನ ಹೆಸರನ್ನು ಉಚ್ಚರಿಸಿದ್ದಕ್ಕೆ ಗೊಂದಲ ಹೆಚ್ಚಾಯಿತು. ಗಲಿಬಿಲಿಗೊಳ್ಳದೆ, ತನಗೀತ ಪರಿಚಯದವನು ಎನ್ನುವುದನ್ನು ಅರ್ಥಮಾಡಿಕೊಂಡು ಶಾಂತನಾಗಿ, ತನಗಿನ್ನು ನನ್ನ ಪರಿಚಯ ಹತ್ತಿಲ್ಲ ಎನ್ನುವುದನ್ನು ಸ್ಪಷ್ಟಪಡಿಸಲು ಕಿರಿ ಹಿಡಿದು ನನ್ನ ಮುಖ ನೋಡಿದ. 'ಮೂವತ್ತೈದು ವರ್ಷದ ಹಿಂದಿನ ಸಂಗತಿ ನೆನಪಾಗುವುದು ಕಷ್ಟ ಅಲ್ಲವೇ ರಾಮಣ್ಣ. ಅದು ನಿನ್ನ ಜೀವನದಲ್ಲಿ ಸಣ್ಣ ಘಟನೆ. ಆದರೆ ನನ್ನ ಬದುಕಿನಲ್ಲಿ ದೊಡ್ಡ, ಬಹುದೊಡ್ಡ ಘಟನೆ. ನನಗೆ ಮರೆಯಾಗದಂತಹದ್ದು' ಎಂದೆ. 'ವ್ಯವಹಾರಸ್ಥನಲ್ಲವೇ ನೂರಾರು ಜನ ಬರುತ್ತಾರೆ, ಹೋಗುತ್ತಾರೆ ಜೊತೆಗೆ ವಯಸ್ಸೂ ಆಯಿತಲ್ಲ... ನೆನಪಿಗೆ ಬರುತ್ತಿಲ್ಲ' ರಾಮಣ್ಣನ ದನಿ ಪ್ರಾಮಾಣಿಕವಾಗಿತ್ತು. ಹೇಳಿದೆ, 'ಬರಬೇಕು ರಾಮಣ್ಣ, ನಾನು... ವರ್ಷೊಪ್ಪತ್ತು ನಿಮ್ಮ ಅನ್ನ ತಿಂದು ಬೆಳೆದವನು. ಶಾಲೆಗೆ ಹೋಗಲಿದ್ದು ನಿಮ್ಮಲ್ಲಿ ಊಟಕ್ಕೆ ಉಳಿದವನಲ್ಲ. ವಾರಾನ್ನದವನಲ್ಲ. ನಿಮ್ಮ ಮನೆಯ ಮಗನಾಗಿಯೇ